# ಮಿಮಿಕ್ರಿ ಮಂಜು ಚೆಲುವರಾಜ ಆದ ಕಥೆ

**ಮಂಜುನಾಥ್ ಎಂ.**

**ಉದಯದ 'ಆನಂದ ರಾಗ'ದ ಚೆಲುವರಾಜ**



◆ **ಸಾರ್ವಜನಿಕ ಕಾರ್ಯಕ್ರಮದಿಂದ ಟೀವಿಗೆ ಬಂದಿದ್ದು ಹೇಗೆ?**

ನನ್ನ ಹೆಸರು ಮಂಜುನಾಥ ಎಂ. ಮಿಮಿಕ್ರಿ ಕಲಾವಿದ ಆದ ಮೇಲೆ ಹೆಸರನ್ನು ಮಿಮಿಕ್ರಿ ಮಂಜು ಎಂದು ಮಾಡಿಕೊಂಡೆ. ಈಗ ಚೆಲುವರಾಜ ಆಗಿದ್ದೇನೆ. ಮುಂದೆ ಚೆಲುವನಾಗಿಯೇ ಉಳಿಯುತ್ತೇನೆ. ಶಾಲೆಯ ದಿನಗಳಲ್ಲಿ ಅಣಕ, ಡಾನ್ಸ್ ಜೊತೆಗೆ ಹಾಡುತ್ತಿದ್ದೆ. ದುಡಿಯುವ ಅನಿವಾರ್ಯತೆ ಇದ್ದಿದ್ದರಿಂದ ಓದುವಾಗಲೇ ಕೆಲಸ ಮಾಡಲು ಶುರುಮಾಡಿದೆ. ದುಡಿಮೆಗೆ ಇದೇ ಆಗಬೇಕು ಅಂತಾನೂ ಇರಲಿಲ್ಲ. ಒಂದಲ್ಲ ಒಂದು ಕೆಲಸವನ್ನು ಮಾಡುತ್ತಿದ್ದೆ. ಮನೆಯಲ್ಲಿ ತುಂಬ ಬಡತನ ಇದ್ದಿದ್ದರಿಂದ ಬಟ್ಟೆ, ಪುಸ್ತಕ, ಶುಲ್ಕ ಎಲ್ಲ ಖರ್ಚಿಗೂ ನಾನೇ ಸಂಪಾದಿಸಬೇಕಿತ್ತು. ಹಾಲಿನ ಡೇರಿಯಲ್ಲಿ ವಾಚ್‌ಮನ್ ಕೆಲಸ ಮಾಡಿದ್ದೇನೆ. ಮೈಸೂರಿನ ಚಾಟ್ಸ್ ಅಂಗಡಿಯೊಂದರಲ್ಲಿ ಪ್ಲೇಟ್ ತೊಳೆಯುತ್ತಿದ್ದೆ. ಪದವಿಗೆ ಬಂದ ಮೇಲೆ ಬೆಳಿಗ್ಗೆ ನ್ಯೂಸ್ ಪೇಪರ್ ಹಾಕಿ, ಸಂಜೆ ಡಾಟ ಎಂಟ್ರಿ ಕೆಲಸ ಮಾಡುತ್ತಿದ್ದೆ. ಡಿಗ್ರಿ ಮುಗಿದ ಮೇಲೆ ಯಾವ ಕೆಲಸವೂ ಇರಲಿಲ್ಲ. ಆಗ ನನಗೆ ಮಿಮಿಕ್ರಿ ಗೊತ್ತಿದೆ. ಅದನ್ನೇ ಏಕೆ ಬಳಸಿಕೊಳ್ಳಬಾರದು ಎಂದು ಯೋಚಿಸಿದೆ. ಆರ್ಕೆಸ್ಟ್ರಾಗಳ ಜಾಹೀರಾತು ನೋಡಿ ಅವರ ನಂಬರ್‌ಗಳಿಗೆ ಮೆಸೇಜ್ ಹಾಕುತ್ತಿದ್ದೆ. ಒಂದು ಆರ್ಕೆಸ್ಟ್ರಾದಲ್ಲಿ ಅವಕಾಶ ಸಿಗುತ್ತದೆ. ಅಲ್ಲಿಂದ ನನ್ನ ಕೆಲಸ ಮತ್ತೆ ಆರಂಭವಾಗುತ್ತದೆ. ನಂತರ ಅದು ರಂಗಭೂಮಿಯಲ್ಲೂ ತಿರುಗಾಡುವಂತೆ ಮಾಡಿಸುತ್ತದೆ. ಅದೇ ಸಮಯದಲ್ಲಿ ಧಾರಾವಾಹಿಗಳಲ್ಲಿ ಬಂದು ಹೋಗುವ ಪಾತ್ರಗಳನ್ನು ನಿರ್ವಹಿಸುವ ಅವಕಾಶ ಸಿಗುತ್ತಿದ್ದವು. 'ಮಜಾಭಾರತ', 'ಕಾಮಿಡಿ ಕಿಲಾಡಿಗಳು' ಶೋನಲ್ಲೂ ಕಾಣಿಸಿಕೊಂಡೆ. ಅದಾದ ಮೇಲೆ ಸಿನಿಮಾಗಳಲ್ಲೂ ಹಾಸ್ಯ ಪಾತ್ರವನ್ನು ನಿರ್ವಹಿಸಿದ್ದೇನೆ.

ಆರ್ಕೆಸ್ಟ್ರಾದಿಂದ ನನ್ನ ಅನೇಕ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವಾಯಿತು. ಅಪ್ಪ ಮಾದೇಗೌಡ, ಅಮ್ಮ ಸಾಕಮ್ಮ ಅವರಿಗೆ ನಾನು ಸರ್ಕಾರಿ ಕೆಲಸಕ್ಕೆ ಹೋಗಬೇಕು ಎನ್ನುವ ಆಸೆ ಇತ್ತು. ಅಪ್ಪ ಗಾರೆ ಕೆಲಸ ಮಾಡುತ್ತಿದ್ದರು. ಅಮ್ಮ ಗಂಧದಕಡ್ಡಿಯನ್ನು ಹೊಸೆಯುತ್ತಿದ್ದರು. ನನ್ನ ಅಕ್ಕ ಸುನಿತಾ ನನ್ನ ಪೋಷಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ. ಬೆಂಗಳೂರಿನಲ್ಲಿ ಅವರ ಮನೆಯಲ್ಲೇ ಇದ್ದೇನೆ.

◆ **ನಾಯಕನ ಪಾತ್ರ ಸಿಕ್ಕಾಗ ನಿಮಗೆ ಏನೆನಿಸಿತು?**

'ಆನಂದ ರಾಗ'ದಲ್ಲಿ ನಾಯಕನ ಪಾತ್ರಕ್ಕೆ ಆಡಿಷನ್ ನೀಡಲು ಫೋನ್ ಬಂತು. ನನ್ನನ್ನು ಮೂರ್ಖನನ್ನಾಗಿ ಮಾಡಲು ಯಾರೋ ಕರೆ ಮಾಡಿರಬಹುದು ಎಂದೇ ನಾನು ಅಂದುಕೊಂಡಿದ್ದೆ. ಆಡಿಷನಿಗೆ ಹೋದ ಮೇಲೆಯೇ ಅದು ಸುಳ್ಳಲ್ಲ ಎಂದು ಗೊತ್ತಾಯಿತು. ಆದರೆ ಒಂದೆರಡು ಬಾರಿ ಹೋದರೂ ಏನೆಂದು ಗೊತ್ತೇ ಆಗಲಿಲ್ಲ. ಸುಮಾರು ಹತ್ತು ಸುತ್ತಿನ ನಂತರ ನನ್ನ ಹೆಸರನ್ನೇ ಅಂತಿಮಗೊಳಿಸಿದರು. ಜೀವನ ಸರಳವಾದದ್ದಲ್ಲ. ನಮ್ಮ ಬಗ್ಗೆ ನಮಗೆ ಅಭಿಮಾನ ಇರಬೇಕು. ಕೀಳರಿಮೆಯಿಂದ ಬಳಲುವುದರಿಂದ ನಷ್ಟವೇ ಹೆಚ್ಚು. ಬದುಕನ್ನು ಪ್ರೀತಿಸಬೇಕು. ಕಾಲ ಎಲ್ಲವನ್ನೂ ಬದಲಿಸುತ್ತದೆ. ಬುದ್ಧಿ ನಮ್ಮ ಕೈಯಲ್ಲಿ ಇರಬೇಕು. ನಮ್ಮ ಕಷ್ಟದ ಕತ್ತಲೆಯಲ್ಲೂ ಅದನ್ನು ಪಾಲಿಸಿದರೆ ಬೆಳಕಿನ ಸೊಬಗನ್ನು ಸವಿಯುವ ಅವಕಾಶ ಇದ್ದೇ ಇರುತ್ತದೆ ಎನ್ನುವುದಕ್ಕೆ ಇದುವೇ ನಿದರ್ಶನ.

◆ **ಸುದ್ದಿ ಪ್ರೊಡಕ್ಷನ್, ಧಾರಾವಾಹಿ ಪ್ರೊಡಕ್ಷನ್ ಹೇಗಿರುತ್ತದೆ?**

ಸುದ್ದಿ ವಾಹಿನಿಗಳಲ್ಲಿ ಅವತ್ತಿನ ಕೆಲಸ ಅವತ್ತೇ ಆಗಬೇಕು. ಮನರಂಜನೆಯ ಟೀವಿಗಳಲ್ಲಿ ಮುಂದಿನ ದಿನಗಳಿಗೆ ಇಂದು ಕಾರ್ಯಕ್ರಮ ರೂಪಿಸುತ್ತೇವೆ. ನ್ಯೂಸ್‌ಚಾನಲ್ ಘಟಿಸಿದ ಘಟನೆಗಳನ್ನು ಮಾಹಿತಿ ಸಿಕ್ಕ ತಕ್ಷಣ ಅವತ್ತೇ ನೀಡುತ್ತವೆ. ಅದಕ್ಕೆ ಸಂಬಂಧಿಸಿ ಸ್ಕ್ರಿಪ್ಟ್‌ಗೆ ನಾವು ಆ ಘಟನಾವಳಿಗಳನ್ನೇ ಆಧರಿಸಿ ರೂಪಿಸುತ್ತೇವೆ. ಮನರಂಜನೆಯಲ್ಲಿ ಈ ನಿರ್ಬಂಧ ಇರುವುದಿಲ್ಲ. ಸ್ಕ್ರಿಪ್ಟ್ ರಚಿಸಲು ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಯಾವುದೋ ಒಂದು ಘಟನೆಗೆ ಸೀಮಿತ ಆಗುವ ಅಗತ್ಯ ಇರಲ್ಲ. ಸುದ್ದಿವಾಹಿನಿಗಳಲ್ಲಿ ಕಾಮಿಡಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದೇನೆ. ಹಾಗೆಯೇ ಪ್ರೊಡ್ಯೂಸರ್ ಆಗಿಯೂ ಕೆಲಸ ನಿರ್ವಹಿಸಿದ್ದೇನೆ. ಈಗ ನಟನಾಗಿದ್ದೇನೆ. ಇಲ್ಲಿ ನನ್ನನ್ನು ತುಂಬ ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಿರ್ದೇಶಕ ಗೋವಿಂದ್ ತಿದ್ದಿ ತೀಡಿ ನನ್ನಲ್ಲಿ ಇರುವ ನಟನಿಗೆ ಒಂದು ರೂಪ ಕೊಡುತ್ತಿದ್ದಾರೆ.

◆ **ಆನಂದ ರಾಗ ಕಥೆಯೇ ವಿಚಿತ್ರ ಇದೆಯಲ್ಲ. ನಿಮಗೆ ಏನೆನಿಸುತ್ತದೆ?**

ಸೀರಿಯಲ್ ಆರಂಭದಲ್ಲಿ ಕಥೆ ಏನು ಅಂತ ನನಗೂ ಗೊತ್ತಿರಲಿಲ್ಲ. ಈಗ ನೋಡಿದರೆ ನನ್ನ ನೈಜ ಅನುಭವವನ್ನೇ ಕಥೆಯಾಗಿ ಹೆಣೆದಿರಬಹುದೇ ಎಂದು ಅನ್ನಿಸುತ್ತಿದೆ. ಇಲ್ಲಿ ಚೆಲುವ ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದಾನೆ. ಅಂದ–ಚಂದದ ಆಕರ್ಷಣೆ ಇಲ್ಲ. ಶಿಕ್ಷಣವೂ ಇಲ್ಲದ ಮುಗ್ಧನ ದುರುಪಯೋಗ ಮಾಡುವುದೂ ಇಲ್ಲಿದೆ. ಚೆಲುವ ಸಾಕಷ್ಟು ಅವಮಾನ ಅನುಭವಿಸುತ್ತಾನೆ. ನನಗೂ ಇಂತಹ ಹಲವು ಅನುಭವಗಳು ಆಗಿವೆ. ಕಪ್ಪು ಹುಡುಗರಿಗೆ ಈ ಕಥೆ ಆಪ್ತಸಮಾಲೋಚನೆಯಂತೆ ಇದೆ. ಕಲರ್ ನೋಡಿ ಬದುಕಬೇಡಿ, ಕಲೆ ನಂಬಿ ಬದುಕಿ ಎನ್ನುವುದು ಇಲ್ಲಿನ ಸಾರಾಂಶ. ವ್ಯಕ್ತಿಯೊಬ್ಬನನ್ನು ಯಾರೇ ಬೆಂಬಲಿಸಲಿ, ತುಳಿಯಲಿ ತಮ್ಮನ್ನು ತಾವು ಮೊದಲು ಇಷ್ಟಪಡಬೇಕು. ಎನ್ನುವುದು ಕಥೆಯ ಆಶಯ. ಅಂಬರೀಶ್ ಅಭಿಮಾನಿಯಾಗಿ ನಾನು ಕಾಣಿಸಿಕೊಂಡಿದ್ದೇನೆ. ಅವರ ಬಗ್ಗೆ ಮಿಮಿಕ್ರಿ ಕೂಡ ಮಾಡುತ್ತೇನೆ.

■ **ರಾಘವೇಂದ್ರ ಕೆ.**